# ಆ ಕರಾಳ ದಿನದಂದು....

## ಗುಜರಾತಿನ ಭೂಜ್ ನಗರದ ವೈದ್ಯರೊಬ್ಬರ ಪ್ರತ್ಯಕ್ಷ ಅನುಭವ

ನಾನು ಭೂಜ್ ಪಟ್ಟಣದಲ್ಲಿ ೧೯೮೭ರಿಂದ ವಾಸಿಸುತ್ತಿದ್ದೇನೆ. ಇಲ್ಲಿನ ಜನ ಅಲ್ಪತೃಪ್ತರು, ಮಹತ್ವಾಕಾಂಕ್ಷಿಗಳಲ್ಲ. ಇದು ಎಷ್ಟು ಸಣ್ಣ ನಗರವೆಂದರೆ, ಎಲ್ಲರಿಗೂ ಮಿಕ್ಕೆಲ್ಲರ ಪರಿಚಯ ಇರುವುದು. ಅನಿರೀಕ್ಷಿತ ಭೂಕಂಪವು ಸಂಭವಿಸಿದಾಗ ನಾನು ಬ್ಯಾಡ್‌ಮಿಂಟನ್ ಆಟ ಆಡುತ್ತಿದ್ದೆ. ಅನಿರೀಕ್ಷಿತವೆಂದು ನಾನು ಹೇಳುವುದು ಏಕೆ ಗೊತ್ತೇನು? ನಾನಿಲ್ಲಿ ಬಂಗಲೆಯನ್ನು ಕಟ್ಟಿದ್ದೇನೆ, ಆಸ್ಪತ್ರೆಯೊಂದನ್ನು ನಡೆಸುತ್ತಿದ್ದೇನೆ. ಇದುವರೆಗೂ ಯಾವ ಅಧಿಕಾರಿಯೂ ಭೂಕಂಪದ ವಿಷಯದಲ್ಲಿ ಜಾಗರೂಕನಾಗಿರುವಂತೆ ನನಗೆ ಹೇಳಿಲ್ಲ. ನನ್ನ ವಾಸ್ತುಶಿಲ್ಪಿ ಮಿತ್ರ ಕುಮ್‌ಟೇಕರ್ ಮಾತ್ರ ನೆಲಮಾಳಿಗೆಯನ್ನು ಕಟ್ಟದಿರುವಂತೆ ಒತ್ತಾಯಿಸಿದ. ಅವನು ಅದಕ್ಕೆ ಕೊಟ್ಟ ಕಾರಣ ಭೂಜ್ ಪಟ್ಟಣ ಭೂಕಂಪನದ ಪರಿಧಿಯಲ್ಲಿ ಬರುವುದು ಎಂದು. ಭೂಜ್‌ನಲ್ಲಿರುವ ೨೦ ಸಂಘಸಂಸ್ಥೆಗಳ ಸಂಪರ್ಕ ಹೊಂದಿದ್ದೇನೆ ನಾನು. ಆದರೆ ಯಾರೂ ಇದರ ಬಗ್ಗೆ ಚರ್ಚೆ ನಡೆಸಿಲ್ಲ.

ಆ ಶುಕ್ರವಾರದ ಮುಂಜಾನೆ ನಾವು ಅನುಭವಿಸಿದ್ದನ್ನು ಕರಾರುವಕ್ಕಾಗಿ ಹೇಳಲು ಯಾರಿಂದಲೂ ಸಾಧ್ಯವಿಲ್ಲ. ಆ ಅನುಭವ ರುದ್ರಭಯಾನಕವಾಗಿತ್ತು, ಆಘಾತಕರವಾಗಿತ್ತು. ಹಲವು ನಿಮಿಷಗಳವರಗೆ ಭೂಮಿಯ ಅದರುವಿಕೆ ನಿಲ್ಲಲೇ ಇಲ್ಲ. ನಾನು ಮತ್ತೆ ಮತ್ತೆ ಆಕ್ರೋಶಿಸುತ್ತಿದ್ದೆ, 'ಓ ದೇವರೇ, ಇದನ್ನು ನೀನೇಕೆ ನಿಲ್ಲಿಸುತ್ತಿಲ್ಲ ?' ಎಂದು. ಧಡಕ್,ಧಡಕ್, ಧಡಕ್, ......ಎಂಬ ಭೀಕರ ಶಬ್ದ. ಕಟ್ಟಡಗಳು ಉರುಳುತ್ತಿದ್ದವು. ಧೂಳಿನ ಅಗಾಧ ಮೋಡ ನಗರವನ್ನೆಲ್ಲ ಆವರಿಸಿತ್ತು. ನನ್ನ ತಂದೆ ಇದನ್ನು ಸರಿಯಾಗಿ ಬಣ್ಣಿಸಿದರು. ಅವರು ಹೇಳಿದರು, ದೊಡ್ಡ ವಿಮಾನವೊಂದು ನಮ್ಮ ತಲೆಯ ಮೇಲೆಯೇ ಹಾದುಹೋದಂತಿತ್ತು ಎಂದು. ನಾನು ಹೊರಬಂದು ನೋಡಿದ್ದು ಮೃತಗೊಂಡಿದ್ದ ಭೂಜ್‌ಪಟ್ಟಣವನ್ನು. ನನ್ನ ಬಾಳಿನ ಅತಿ ಕೆಡುಕಿನ ೧೫ ನಿಮಿಷಗಳು ಅವು.

ನಾನು ಮನೆಯತ್ತ ವಾಹನದಲ್ಲಿ ಸಾಗಿದೆ. ನನ್ನ ಕುಟುಂಬದವರನ್ನು ಕಂಡೆ. ನನ್ನ ಪತ್ನಿ ಅಲಕಾ ಮತ್ತು ನನ್ನ ಮಗಳು ನನಗಾಗಿ ಹುಡುಕುತ್ತಿದ್ದರು. ಅವರೆಲ್ಲರೂ ರೋದಿಸುತ್ತಿದ್ದರು. ನಾವು ೫ ಜನ ಪರಸ್ಪರ ಅಪ್ಪಿಕೊಂಡು ಕಣ್ಣೀರು ಸುರಿಸಿದೆವು. ನನಗಾಗ ನನ್ನ ಆಸ್ಪತ್ರೆಯಲ್ಲಿರುವ ರೋಗಿಗಳ ನೆನಪಾಯಿತು. ನಾನು ಆಸ್ಪತ್ರೆಯತ್ತ ಧಾವಿಸಿದೆ. ಮಾರ್ಗದಲ್ಲಿ ವಾಹನದಲ್ಲಿ ಯಾರನ್ನೋ ಕೂಡಿಸಿಕೊಂಡು ಹೋದೆ. ನನ್ನ ಇಂದ್ರಿಯಗಳು ಸ್ತಬ್ಧವಾಗಿದ್ದವು. ಪಕ್ಕದಲ್ಲಿ ಕುಳಿತವನ ಅರಿವೂ ನನಗಿರಲಿಲ್ಲ. ನನ್ನ ಅಂಗಗಳೆಲ್ಲ ಸ್ತಂಭೀಭೂತವಾಗಿದ್ದವು.

ಆಸ್ಪತ್ರೆಯಲ್ಲಿನ ನನ್ನ ಉದ್ಯೋಗಿಗಳು ಕ್ಷಿಪ್ರವಾಗಿ ಕಾರ್ಯವೆಸಗಿದ್ದರು. ಅವರೆಲ್ಲರೂ ರೋಗಿಗಳನ್ನು ಕುಸಿದುಬೀಳುತ್ತಿದ್ದ ಆಸ್ಪತ್ರೆಯ ಕಟ್ಟಡದಿಂದ ಹೊರಗೆ ಕರೆದುಕೊಂಡು ಬಂದಿದ್ದರು. ಹೀಗಾಗಿ ಅವರೆಲ್ಲರೂ ಆಪತ್ತಿನಿಂದ ಪಾರಾಗಿದ್ದರು. ನಾನು ಆ ಸ್ಥಳಕ್ಕೆ ಬಂದಾಗ ನನ್ನ ಒಬ್ಬ ಉದ್ಯೋಗಿ ಹೇಳಿದ 'ಸರ್, ನಿಮ್ಮ ಆಸ್ಪತ್ರೆಯ ವಿಷಯವನ್ನು ಮರೆತುಬಿಡಿ. ಅದು ನಿರ್ನಾಮವಾಗಿದೆ.' ನಾನು ಡಾ. ಮಹಾದೇವ ಪಟೇಲರನ್ನು ಭೇಟಿಯಾದೆ. ನಾವಿಬ್ಬರೂ ಅಪ್ಪಿಕೊಂಡು ಅತ್ತೆವು. ಯಾರೋ ಒಬ್ಬರು ನನ್ನನ್ನು ಅಲುಗಾಡಿಸುತ್ತ ಹೇಳಿದರು 'ಡಾಕ್ಟರ್, ನೀವೂ ಕೂಡ ಎದೆಗುಂದುವುದೆ?' ಭೂಜ್ ಪಟ್ಟಣದ ಆ ನಿವಾಸಿ ನನ್ನನ್ನು ಕಾರ್ಯಕ್ಷೇತ್ರಕ್ಕೆ ಧುಮುಕುವಂತೆ ಹೇಳುತ್ತಿದ್ದ. ಆದರೆ ನಾನು ಅದಕ್ಕೆ ತಯಾರಾಗಿರಲಿಲ್ಲ. ನಾನು ಹೇಳಿದೆ : 'ನಾನೇನು ಮಾಡಲಿ? ನಡೆಯಿರಿ ಜನರಲ್ ಆಸ್ಪತ್ರೆಗೆ ಹೋಗೋಣ. ' ಆಗ ಅವನು ನುಡಿದ : 'ನಿಮಗೆ ತಿಳಿಯದೇನು? ಅದೂ ಕುಸಿದು ಬಿದ್ದಿದೆ. ನಿರ್ನಾಮವಾಗಿ ಹೋಗಿದೆ.' ನನಗೆ ಮಾತೇ ಹೊರಡಲಿಲ್ಲ.

ನನ್ನ ಆಸ್ಪತ್ರೆ ಇದ್ದೆಡೆ ಈಗಾಗಲೆ ಜನರು ಜಮಾಯಿಸುತ್ತಿದ್ದರು. ೧೦ ನಿಮಿಷಗಳಲ್ಲಿ ೧೦೦ ಜನ ರೋಗಿಗಳು ಸೇರಿಬಿಟ್ಟಿದ್ದರು. ಆಗ ಮುಂಜಾನೆ ೯.೩೦ ಗಂಟೆ. ರೋಗಿಗಳೆಲ್ಲ ತೀವ್ರವಾಗಿ ಗಾಯಗೊಂಡಿದ್ದರು. ಕೆಲವರ ಕರುಳು ಒಡೆದಿತ್ತು. ಇನ್ನು ಕೆಲವರ ಕೈಗಳು ಮುರಿದಿದ್ದವು. ಮತ್ತೆ ಹಲವರು ಭಗ್ನಗೊಂಡ ಕಾಲುಗಳೊಡನೆ ಬಂದಿದ್ದರು. ಅವರಿಗೆಲ್ಲರಿಗೂ ತುರ್ತಾಗಿ ಶಸ್ತ್ರಚಿಕಿತ್ಸೆ ಮಾಡಬೇಕಾಗಿತ್ತು. ನಾನು ಆ ಕ್ಷಣದಲ್ಲಿಯೆ ಒಂದು ಸರಿಯಾದ ನಿರ್ಣಯ ತೆಗೆದುಕೊಂಡೆ. ಅದು ಹೇಗೆ ನನಗೆ ಸಾಧ್ಯವಾಯಿತು ಎಂದು ಕೇಳದಿರಿ. ನಾನು ಗಾಯಗೊಂಡವರನ್ನು ಜ್ಯೂಬಿಲಿ ಮೈದಾನಕ್ಕೆ ನನ್ನೊಡನೆ ಬರುವಂತೆ ಹೇಳಿದೆ.

ಮೈದಾನದಲ್ಲಿ ನೂಕುನುಗ್ಗಲು. ನನಗೆ ಆಶ್ಚರ್ಯ, ಕೇವಲ ಹತ್ತು ನಿಮಿಷಗಳಲ್ಲಿ ಇಷ್ಟೊಂದು ಸಂಖ್ಯೆಯ ಗಾಯಾಳುಗಳಿಗೆ ಜ್ಯೂಬಿಲಿ ಮೈದಾನದಲ್ಲಿ ವೈದ್ಯಕೀಯ ಸಹಾಯ ಸಿಗುತ್ತದೆಂದು ತಿಳಿದಿದ್ದಾದರೂ ಹೇಗೆ? ಆ ಹುಚ್ಚು ನುಗ್ಗಾಟದಲ್ಲಿ ಭೂಜ್ ನಗರದ ಹಲವಾರು ಒಳ್ಳೆಯ ವೈದ್ಯರುಗಳು ಇರಲಿಕ್ಕೂ ಸಾಕು. ಆದರೆ ಮೊದಲ ಕೆಲವು ಗಂಟೆಗಳ ಕಾಲ ಅಲ್ಲಿ ನೆರವಿಗಿದ್ದ ಸರ್ಜನ್ ನಾನೊಬ್ಬನೇ. ಜನರು ನನ್ನ ದೃಷ್ಟಿ ಸೆಳೆಯಲು ಮೇಲೆ ಮೇಲೆ ಬೀಳತೊಡಗಿದರು. ನಾನು ರೋಗಿಗಳ ಸಂಬಂಧಿಕರಲ್ಲಿ ಇಬ್ಬರನ್ನು ನನ್ನ ರಕ್ಷಣೆಗಾಗಿ ಸುತ್ತುವರಿದು ನಿಲ್ಲುವಂತೆ ಕೇಳಿಕೊಂಡೆ.

ನನ್ನ ಬಳಿ ಯಾವುದೇ ಇಂಜೆಕ್ಷನ್‌ಗಳಿರಲಿಲ್ಲ. ನಾನು ನಿಸ್ಸಹಾಯಕನಾಗಿದ್ದೆ. ನನ್ನ ಬಳಿ ಸೂಜಿ ಅಥವಾ ದಾರವೂ ಇರಲಿಲ್ಲ. ಆ ಪರಿಸ್ಥಿತಿಯಲ್ಲಿ ನಾನೇನು ಮಾಡಿದೆ ಗೊತ್ತೇನು? ನಾನು ರೋಗಿಗಳನ್ನು ಅಲುಗಾಡಿಸಲು ಆರಂಭಿಸಿದೆ. ಪ್ರೀತಿಯಿಂದ ಅವರನ್ನು

ತಮ್ಮ ಧಿಗ್ಭ್ರಮೆಯಿಂದ ಹೊರಬರುವಂತೆ ಹೇಳುತ್ತಿದ್ದೆ. ಈ ಮಧ್ಯೆ ಒಬ್ಬ ಯುವಕನಿಗೆ, ಔಷಧಿ ಅಂಗಡಿಯೊಂದಕ್ಕೆ ನುಗ್ಗಿ ಅಲ್ಲಿರುವ ಆವಶ್ಯಕ ಸಲಕರಣೆಗಳು ಅಂದರೆ ಸಿರಿಂಜ್‌ಗಳು, ಗ್ಲುಕೋಸ್ ಬಾಟಲ್‌ಗಳು, ವೈದ್ಯಕೀಯ ಸೂಜಿ ದಾರಗಳು ಮುಂತಾದುವನ್ನು ತರಲು ಹೇಳಿದೆ.' ಹೆದರಬೇಡ, ಅವುಗಳನ್ನು ಕದ್ದ ಅಪವಾದವನ್ನು ನಾನು ಭರಿಸುತ್ತೇನೆ ' ಎಂದು ಆಶ್ವಾಸನೆಯಿತ್ತೆ. ಅವನು ಕೆಲವಷ್ಟನ್ನು ತಂದ. ಆದರೆ ಅದು ಎಳ್ಳಷ್ಟೂ ಸಾಲದು. 'ಔಷಧಿಗಳನ್ನು ತನ್ನಿ' ಎಂದು ನಾನು ಕೂಗಿಕೊಂಡೆ. ನಾನು ಮತ್ತೆ ಮತ್ತೆ ಕೂಗಿಕೊಂಡಾಗ ಜನಕ್ಕೆ ಧೈರ್ಯ ಬಂತು. ನನಗೆ ಬೇಕಾದಷ್ಟು ಔಷಧಿಗಳು ಸಿಕ್ಕವು. ಆಗ ಸುಮಾರು ೯.೪೦ರ ಸಮಯ.

ನನಗೆ ಸಮಸ್ಯೆಯ ಅಗಾಧತೆಯ ಅರಿವಾಗಿತ್ತು. ನಾನು ಮಾಡುತ್ತಿರುವುದು ಸಾಕಾಗುವುದಿಲ್ಲ ಎಂದು ಮನವರಿಕೆಯಾಯಿತು. ಒಂದು ಗಂಟೆಯೊಳಗೆ ಅಂಜಾರ್ ಪಟ್ಟಣದಿಂದ ರೋಗಿಗಳು ಬರಲಾರಂಭಿಸಿದರು.ಹಲವರಿಗೆ ಗಂಭೀರವಾದ ಗಾಯಗಳಾಗಿದ್ದವು. ಆ ಸುಮಾರಿಗೆ ಡಾ. ಪಟೇಲ್, ಡಾ. ಪಿ.ಎನ್. ಆಚಾರ್ಯ, ಡಾ. ಪೂಜಾರ ಮತ್ತು ಡಾ.ಭರತ್ ಜೋಷಿ ನನ್ನನ್ನು ಸೇರಿಕೊಂಡರು. ನಾನು ಗಾಯಾಳುಗಳಿಗೆ ಆಪರೇಷನ್ ಮಾಡಬೇಕಾಗಿತ್ತು. ನಾನು ಹತಾಶನಾಗಿಬಿಟ್ಟಿದ್ದೆ. ಸಂಪೂರ್ಣ ನಗರ ಕುಸಿದು ಬಿದ್ದಿತ್ತು. ಒಂದು ಆಪರೇಷನ್ ಥಿಯೇಟರ್ ಕೂಡ ಸಿಗುತ್ತಿರಲಿಲ್ಲ. ನನ್ನ ಆಸ್ಪತ್ರೆಗೆ ಧಾವಿಸಿ, ಆಪರೇಷನ್ ಸಾಮಗ್ರಿಗಳನ್ನು ತರುವಂತೆ ನನ್ನ ಸಹೋದ್ಯೋಗಿ ಭರತ್ ಚಟಾನಿಯವರಿಗೆ ಹೇಳಿದೆ. ರೋಗಿಗಳ ಸಂಬಂಧಿಕರಿಗೆ ಕೆಲವು ಕೆಂಪು ಹಂಚುಗಳನ್ನು, ಮರದ ಹಲಗೆಗಳನ್ನೂ ಮತ್ತು ರಟ್ಟುಗಳನ್ನು ತರಲು ಕೇಳಿಕೊಂಡೆ. ರೋಗಿಗಳ ಮುರಿದ ಅಂಗಗಳಿಗೆ ಪ್ಲಾಸ್ಟರ್ ಹಾಕಲು ಇವುಗಳು ಬೇಕಾಗಿದ್ದವು. ಯಾರೋ ಒಬ್ಬರಿಗೆ ಮೆನಾನಿಟಾಲ್ ಔಷಧ ತರಲು ಹೇಳಿದೆ. ಶಾಲುಗಳು, ಅಂಗಿಗಳು ಮತ್ತು ಸೀರೆಗಳ ಚೂರುಗಳನ್ನೇ ಬ್ಯಾಂಡೇಜಿಗಾಗಿ ಉಪಯೋಗಿಸಿದೆ. ಒಬ್ಬ ಗಾಯಾಳು ರಕ್ತಸ್ರಾವವಾಗುತ್ತಿದೆಯೆಂದು ದೂರಿದ. ಒಡನೆ ಅವನ ಪೇಟವನ್ನು ಹರಿದು ಅವನ ತೊಡೆಗೆ ಗಟ್ಟಿಯಾಗಿ ಕಟ್ಟಿದೆ.

ಒಬ್ಬ ವ್ಯಕ್ತಿ ಒಬ್ಬಳು ಹುಡುಗಿಯನ್ನು ಕೈಯಲ್ಲಿ ಹಿಡಿದು ನನ್ನೆಡೆಗೆ ನುಗ್ಗಿ ಬಂದು, 'ಡಾಕ್ಟರ್, ದಯವಿಟ್ಟು ಮೊದಲು ಇವಳ ಶುಶ್ರೂಷೆ ಮಾಡಿ' ಎಂದು ಕೇಳಿಕೊಂಡ. ನನಗನಿಸಿತು, ಆ ಹುಡುಗಿ ಮರಣಹೊಂದಿದ್ದಾಳೆ ಎಂದು. ಆಕೆಯ ತಂದೆಗೆ ಇದರ ಬಗ್ಗೆ ನಿಖಿರವಾಗಿ ತಿಳಿಯಬೇಕಾಗಿತ್ತು. ಅವನು ಬಡಬಡಿಸಿದ : 'ಬೇಗ ಡಾಕ್ಟರ್, ಬೇಗ.. ಅವಳು ಸತ್ತಿದ್ದರೆ, ನಾನು ನನ್ನ ಮನೆಯ ಅವಶೇಷಗಳ ಕೆಳಗೆ ನನ್ನ ಹೆಂಡತಿಗಾಗಿ ಹುಡುಕಬೇಕು.' ಅವನು ತುಂಬ ಧಿಗ್ಭ್ರಮೆಹೊಂದಿದ್ದ, ಭಾವನಾಶೂನ್ಯನಾಗಿ ಬಿಟ್ಟಿದ್ದ. ನಾನು ಅವನಿಗೆ ಹೇಳಿದೆ : 'ಅವಳನ್ನು ನನ್ನ ರಕ್ಷಣೆಯಲ್ಲಿ ಬಿಡು. ಓಡು, ನಿನ್ನ ಹೆಂಡತಿಯನ್ನು ಹುಡುಕು.' ಅವನು ತನ್ನ ಹುಡುಗಿಯನ್ನು, ಆ ಮೃತ ದೇಹವನ್ನು ನಮ್ಮ ಬಳಿ ಬಿಟ್ಟು ಹೋದ.

ಗಾಯಾಳುಗಳ ಮುರಿದ ಅಂಗವನ್ನು ಕತ್ತರಿಸಲು ಶೀಘ್ರ ತೀರ್ಮಾನ ಕೈಗೊಳ್ಳುವಂತೆ ಅವರ ಸಂಬಂಧಿಗಳಿಗೆ ಹೇಳಬೇಕಾಗಿತ್ತು. ಅಂದಿನ ದಿನ ನನಗೆ ಬಹಳ ಯಾತನೆ ಕೊಡುತ್ತಿದ್ದ ವಿಷಯವೆಂದರೆ ಅದೇ. ನಾನು ಪ್ರಾಣವೊಂದನ್ನು ಉಳಿಸಲು ಗಾಯಗೊಂಡ ಆ ಅಂಗವನ್ನು ಕತ್ತರಿಸಲೇ ಬೇಕಾಗಿತ್ತು. ಆ ವಿಷಯದಲ್ಲಿ ನಾನು ನಿರ್ದಯಿಯಾಗಿಬಿಟ್ಟಿದ್ದೆ. ಸಾಧಾರಣವಾಗಿ ಹಾಗೆ ನಾನು ನಡೆದುಕೊಳ್ಳುವುದಿಲ್ಲ. ಅದಕ್ಕಾಗಿ ನನ್ನ ಮೇಲೆ ಕ್ಷಮೆಯಿರಲಿ. ಅಲ್ಲಿದ್ದ ಪ್ರತಿ ಮೂರು ರೋಗಿಗಳಲ್ಲಿ ಒಬ್ಬರನ್ನು ನಾನು ಬಲ್ಲೆ. ಅವರು ನನ್ನೆಡೆಗೆ ನೋಡುತ್ತ ಆಕ್ರೋಶಿಸುತ್ತಿದ್ದರು 'ಡಾಕ್ಟರ್, ನನ್ನ ಕಾಲುಗಳ ಕಡೆ ಏಕೆ ನೀವು ಗಮನಹರಿಸುತ್ತಿಲ್ಲ ? ನಿಮಗೆ ನನ್ನ ಗುರುತು ಹತ್ತಲಿಲ್ಲವೇ ? 'ಎಂದು.

ನನ್ನ ಸಹೋದ್ಯೋಗಿಗಳು ನಾನು ಒಂದೇ ಬಾರಿಗೆ ಮೂರು ಜನರ ಗಾಯಗಳಿಗೆ ಹೊಲಿಗೆ ಹಾಕುವಂತೆ ಗಾಯಾಳುಗಳನ್ನು ಮಲಗಿಸುತ್ತಿದ್ದರು. ನೂರಾರು ರೋಗಿಗಳು ಬರಿ ನೆಲದಲ್ಲಿ ಬಿದ್ದುಕೊಂಡಿದ್ದರು. ಒಂದು ಸೂಜಿ, ದಾರ ಮತ್ತು ಒಂದು ಕತ್ತರಿಯೊಂದಿಗೆ ಗಾಯಗಳಿಗೆ ಹೊಲಿಗೆ ಹಾಕುವುದಕ್ಕೆ ಆರಂಭಿಸಿದೆ ನಾನು. ನಾನು ಗಾಯಾಳುಗಳಿಗೆ ಕೂಗಿಹೇಳುತ್ತಿದ್ದೆ, 'ಅಳಬೇಡಿ, ಸ್ವಲ್ಪ ಸುಮ್ಮನಿರಿ' ಎಂದು. ನನ್ನ ಸುತ್ತಮುತ್ತಲೂ ವಿಪರೀತ ಶಬ್ದ. ಜನರು ನೋವಿನಿಂದ ಕಿರುಚುತ್ತಿದ್ದರು. ಅವರ ನೆಂಟರು ದುಃಖಾತಿರೇಕದಿಂದ ಅಳುತ್ತಿದ್ದರು. ನಾನು ಅಂದು ಸುಮಾರು ೧೫೦ ರೋಗಿಗಳ ಗಾಯಗಳಿಗೆ ಹೊಲಿಗೆ ಹಾಕಿದೆ ಎಂದು ಕಾಣುತ್ತದೆ.

೧೧ ಗಂಟೆಯ ಸಮಯ. ಕಡೆಗೂ ನನಗೆ ಆಪರೇಷನ್ ಮಾಡಲು ಒಂದು ಟೇಬಲ್ ಸಿಕ್ಕಿತು. 'ನಾನು ಒಂದು ಗುಡಾರ ಹಾಕಿಕೊಡಿ' ಎಂದು ಕೇಳಿಕೊಂಡೆ. ಅವುಗಳ ವ್ಯವಸ್ಥೆಯಾದ ನಂತರವೇ ಆಪರೇಷನ್ ಮಾಡಲು ಆರಂಭಿಸಿದೆ. ಮತ್ತೆ, ಇನ್ನೊಂದು ಆಪತ್ತು. ನನ್ನಲ್ಲಿದ್ದ ಒಂದು ಜೊತೆ ಕತ್ತರಿಯಿಂದಲೇ ನಾನು ಹಲವಾರು ರೋಗಿಗಳ ಕಾಲುಗಳನ್ನು ಅಥವಾ ತೋಳುಗಳನ್ನು ಕತ್ತರಿಸಬೇಕಾಗಿತ್ತು. ನಾನು ಹಾಗೆ ಮಾಡಿದ್ದು ಜೀವ ಉಳಿಸಲು. ಇತರ ವೈದ್ಯರು ಬ್ಯಾಂಡೇಜುಗಳನ್ನು ಕಟ್ಟಿದರು. ೩ ಗಂಟೆಯ ಹೊತ್ತಿಗೆ ನನಗೆ ೫ ಟೇಬಲ್‌ಗಳು ಮತ್ತು ಎಷ್ಟೋ ಬಗೆಯ ವೈದ್ಯಕೀಯ ಸಹಾಯ ಸಲಕರಣೆಗಳು ಸಿಕ್ಕವು.

ನಾನು ರೋಗಿಗಳನ್ನು ಉಪಚರಿಸುತ್ತಿದ್ದಾಗ ಅಲ್ಪ ಸ್ವಲ್ಪ ಸಮಾಚಾರ ಕಿವಿಗೆ ಬೀಳುತ್ತಿತ್ತು, 'ರಮೇಶ ಮರಣ ಹೊಂದಿದ ನಂತೆ,' ಅಥವಾ ಇನ್ನಾರೋ ಸ್ನೇಹಿತನ ನಿಧನವಾಯಿತು. – ಇತ್ಯಾದಿ. ನನಗೆ ಪರಿಚಯವಿದ್ದ ಬಹಳ ಮಂದಿ ಮೃತಪಟ್ಟಿದ್ದರು. ಒಬ್ಬ, ನಾನು ಗಾಯಗಳಿಗೆ ಹೊಲಿಗೆ ಹಾಕುತ್ತಿದ್ದಾಗ, ಬಿಸ್ಕತ್ತಿನ ಚೂರು ಗಳನ್ನು ನನ್ನ ಬಾಯಿಗೆ ತುರುಕುತ್ತಿದ್ದ. ನನ್ನ ಬಗ್ಗೆ ಅಷ್ಟು ಕಳಕಳಿ ಅವನಿಗೆ.

ನಿಧಾನವಾಗಿ ಎಲ್ಲವೂ ವ್ಯವಸ್ಥಿತ ರೂಪಕ್ಕೆ ಬಂತು. ನಮಗೆ ಬೇಕಾದ ಸಲಕರಣೆಗಳನ್ನು ಯಾರು ತಂದರೆಂಬುದೂ ತಿಳಿಯದು. ವಸ್ತುಗಳು ರಾಶಿರಾಶಿ ಬಂದವು. ಡೈಕ್ಲೋರಿನ್ ಮತ್ತು ಟೆಟಾನಸ್ ಇಂಜೆಕ್ಷನ್‌ಗಳು ಸಿಕ್ಕವು. ೭ ಘಂಟೆಯ ಸಮಯ. ನನಗಂತೂ ಸುಸ್ತೋ ಸುಸ್ತು. ಇನ್ನು ಮುಂದೆ ಅಲ್ಲಿರುವುದು ನನಗೆ ಅಸಾಧ್ಯವಾಗಿತ್ತು. ನಾನು ಜಿಲ್ಲಾ ವೈದ್ಯಾಧಿಕಾರಿಗಳ ಕಛೇರಿಗೆ ಹೋಗಿ ಮಂದಿನ ವ್ಯವಸ್ಥೆ ಮಾಡುವಂತೆ ಕೇಳಿಕೊಂಡೆ. (*ಇಂಟರ್ ನೆಟ್‌ನಿಂದ*)